ಶ್ರೀ ರಾಮಕೃಷ್ಣ ಹೆಗ್ಗಡೆ.—ಅಶುದ್ಧ ನೀರನ್ನು ಕುಡಿದರೆ ಆರೋಗ್ಯ ಕೆಡುತ್ತದೆ ಅನ್ನುವುದು ನಿರ್ಮಲ ವಿವಾದವಾದ ಮಾತು. ಅದಕ್ಕಾಗಿ ಗ್ರಾಮಾಂತರ ಪ್ರದೇಶಗಳಿಗೆ ಶುದ್ಧ ನೀರಿನ ಪೂರೈಕೆಗಾಗಿ ಅನೇಕ ಸ್ಕೀಮುಗಳನ್ನು ಹಾಕಿದ್ದೇವೆ. ಅವುಗಳಲ್ಲಿ ನ್ಯಾಶನಲ್ ರೂರಲ್ ವಾಟರ್ ಸಪ್ಲೈ ಸ್ಕೀಮು ಒಂದು; ರೋಕಲ್ ಡೆವಲಪ್‌ಮೆಂಟ್ ಕಾರ್ಯಕ್ರಮದಲ್ಲಿ ಮತ್ತು ಸ್ಪೆಶಲ್ ಆ್ಯಂಡ್ ರೆವಿನ್ಯು ಗ್ರ್ಯಾಂಟಿನಲ್ಲಿ 5 ಪರ್ಸೆಂಟ್, ಎಸ್. ಇ. ಎಸ್. ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ಬಾವಿ ತೆಗೆಯಲು ಹೆಚ್ಚು ಮಹತ್ವ ಕೊಟ್ಟಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—2,500 ಪಾಪ್ಯುಲೇಶನ್ ಇರುವ ಕಡೆ ಬಾವಿ ಇಲ್ಲದಿದ್ದರೆ ಎಲ್ಲಿಂದ ನೀರು ತರುತ್ತಾರೆ? ಅಲ್ಲಿ ಜನಗಳಿಗೆ ಎಷ್ಟು ತೊಂದರೆ ನೀರಿಗೆ ಇರಬೇಕು? ಆದ್ದರಿಂದ ಹಾಗ್ರತೆ ಕೆಲಸ ಮಾಡಿದರೆ ಜನರಿಗೆ ಅನಕೂಲವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ.

Amount Earmarked for the Major Irrigation Projects for the year 1963-64.

*Q.—341. **Sri M. C. BASAPPA** (Chamarajanagar).—

Will the Government be pleased to state :—

(*a*) the amount earmarked for the Major Irrigation Projects for the year 1963-64 in the State ;

(*b*) the actual expenditure till 31st December 1963 ?

A.—**Sri VEERENDRA PATIL** (Minister for Public Works) [on behalf of SRI S. NIJALINGAPPA (Chief Minister.]

(*a*) Rs. 625.00 lakhs.

(*b*) Rs. 377.72 lakhs.

ಶ್ರೀ ಎಂ. ಸಿ. ಬಸಪ್ಪ.—ಭಾರಿ ಪ್ರಮಾಣದ ನೀರಾವರಿ ಯೋಜನೆಗಳಿಗೆ ನಣ್ಣದಾಗಿ ದುಡ್ಡು ಖರ್ಚಾಗಿದೆ. ಇದಕ್ಕೆ ಏನಾದರೂ ನಿರ್ದಿಷ್ಟವಾದ ಕಾರ್ಯಗಳು ಇದೆಯೊ? 3ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಬೇಕಾದ ಕೆಲಸಗಳನ್ನು ನಾನಾ ಕಾರಣಗಳಿಗಾಗಿ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು ?

† ಶ್ರೀ ವೀರೇಂದ್ರ ಪಾಟೀಲ್.—ಈಗ ಡಿಸೆಂಬರ್ ಕೊನೆಯವರೆಗೂ ಎಷ್ಟು ಖರ್ಚಾಗಿದೆ ಅಂತ ತಾವು ಕೇಳಿದ್ದೀರಿ, ಅದಕ್ಕೆ 377.72 ಲಕ್ಷ ರೂಪಾಯಿಗಳು ಅಂತ ಹೇಳಿದ್ದೇವೆ. ರೇಟೆಸ್ಟ್ ಫಿಗರ್ಸ್ ತೋರಿಸುತ್ತೇನೆ:

> Expenditure up to the end of February 1964 is Rs. 475 lakhs and anticipated expenditure during the month of March 1964 is 156 lakhs. Now we are going to spend 631 lakhs as against the provision of 625 lakhs-.

ಶ್ರೀ ಎಂ. ಸಿ. ಬಸಪ್ಪ.—ಇಷ್ಟು ಕಮ್ಮಿ ವೆಚ್ಚ ಮಾಡುವುದರಿಂದ ಕೃಷ್ಣ, ಗೋದಾವರಿ, ಕಾವೇರಿ ನೀರನ್ನು ಉಪಯೋಗಿಸುತ್ತೇವೆ ಎಂದು ಆಶ್ವಾಸನೆ ಕೊಡುತ್ತಿದ್ದೀರೊ, ಅದು ಸಾಧ್ಯವೋ ?

ಶ್ರೀ ವೀರೆಂದ್ರ ಪಾಟೀಲ್.—ಒಂದೇ ಪಂಚವಾರ್ಷಿಕ ಯೋಜನೆಯಲ್ಲಿ ಉಪಯೋಗಿಸಿಕೊಳ್ಳುತ್ತೇವೆ ಅಂತ ಆಶ್ವಾಸನೆಯನ್ನು ಕೊಟ್ಟಿಲ್ಲ. ಯಾವುದೇ ಒಂದು ಪ್ಲಾನಿನಲ್ಲಿ ಮೊಬಲಗು, ದುಡ್ಡು ಪೇರಿಸಬೇಕಾದಾಗ ಪ್ಲಾನಿಂಗ್ ಕಮಿಶನ್ನಿನವರು 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊಟ್ಟದ್ದು 40 ಕೋಟಿ; ಸುಮಾರು 66 ಲಕ್ಷ ಮಾತ್ರ ಒದಗಿಸಿದ್ದಾರೆ. ಆ ಪ್ರಕಾರ ಅವರು ಬ್ರೇಕಪ್ ಮಾಡಿ ಪ್ರತಿವರ್ಷವೂ ಇಷ್ಟು ಮೇಜರ್ ಇರಿಗೇಶನ್ ಸಲುವಾಗಿ ಇಡಬೇಕೆಂದು ಹೇಳುತ್ತಾರೆ. ಅವರ ಅಪ್ರೂವರ್ ಇಲ್ಲದೆ ನಾವು ಮನಸ್ಸಿಗೆ ಬಂದಹಾಗೆ ಮಾಡುವುದಕ್ಕಾಗುವುದಿಲ್ಲ. ಈ ದಿವನ ಹೆಚ್ಚು

ಪ್ರಮಾಣದಲ್ಲಿ ಖರ್ಚುಮಾಡಬೇಕೆಂಬುದನ್ನು ವಿಚಾರ ಮಾಡುತ್ತಿದ್ದೇವೆ. ರಿಸೋರ್ಸ್ ಪೊಸಿಶನ್ ನಾವು ವಿಚಾರ ಮಾಡಬೇಕಾಗುತ್ತದೆ. 20 ಕೋಟಿ ರೂಪಾಯಿ ಪ್ರತಿವರ್ಷ ಖರ್ಚುಮಾಡಬೇಕು ಅಂದರೂ ಖರ್ಚು ಮಾಡಬಹುದು. ಆ ಶಕ್ತಿ ಇದೆ. ದುಡ್ಡು ಬೇಕಲ್ಲ? ನಮ್ಮ ರಿಸೋರ್ಸನ್ ಉಪಯೋಗಿಸಿ ಹೆಚ್ಚು ಹೆಚ್ಚು ಖರ್ಚುಮಾಡುವ ವಿಚಾರ ಸರಕಾರದ ಗಮನದಲ್ಲಿದೆ.

ಶ್ರೀ ಟಿ. ಮಾದಯ್ಯಗೌಡ.—3ನೇ ಪಂಚವಾರ್ಷಿಕ ಯೋಜನೆ ಕಾಲದಲ್ಲಿ 40 ಕೋಟಿ ರೂಪಾಯಿ ಗಳನ್ನು ನಾವು ಖರ್ಚು ಮಾಡಬೇಕು; ಎಂದು ಅಭಿಪ್ರಾಯಪಟ್ಟಿರುವಂತೆ, ಹಿಂದೆ ಇದಕ್ಕೋಸ್ಕರ ತೆಗೆದುಕೊಂಡಿರುವಂಥ ಪ್ರಾಜೆಕ್ಟುಗಳೆಷ್ಟು, ಹೊಸದಾಗಿ ತೆಗೆದುಕೊಂಡಿರುವ ಪ್ರಾಜೆಕ್ಟುಗಳೆಷ್ಟು, 3ನೇ ಯೋಜನೆಯ ಕಾಲದಲ್ಲಿ ಎಷ್ಟು ಎಕರೆ ಜಮೀನು ನೀರಾವರಿಯಾಗುತ್ತದೆ?

ಶ್ರೀ ವೀರೇಂದ್ರ ಪಾಟೀಲ್.—ಅದು ಬಹಳ ದೊಡ್ಡ ಪ್ರಶ್ನೆ, ಒಮ್ಮೆ ಕೇಳಬೇಕು. ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಹೇಳಬಹುದು. ಮೊದಲನೆಯ ವರ್ಷ 2ನೇ ಪಂಚವಾರ್ಷಿಕ ಯೋಜನೆಯಲ್ಲಿ 25 ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದೇವೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ 7 ಪ್ರಾಜೆಕ್ಟುಗಳನ್ನು ಹೊಸದಾಗಿ ತೆಗೆದುಕೊಂಡಿದ್ದೇವೆ. ಈ ರೀತಿಯಿಂದ ಪ್ರತಿಯೊಂದರ ಎಸ್ಟಿಮೇಟೆಡ್ ಕಾಸ್ಟ್ ಎಷ್ಟು ಎಂದು ಹೇಳಬೇಕಾದರೆ ನನ್ನ ಹತ್ತಿರ ಸ್ಟೇಟ್‌ಮೆಂಟು ಇದೆ. I am prepared to lay it on the Table of the House.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನಾವು ಏಕಾಏಕಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಪ್ಲಾನಿಂಗ್ ಕಮಿಶನ್ನಿನವರು ಎಷ್ಟೆಷ್ಟು ದುಡ್ಡು ಕೊಡುತ್ತಾರೊ ಅದನ್ನು ನೋಡಿಕೊಂಡು ಕೆಲಸ ತೆಗೆದುಕೊಳ್ಳಬೇಕು ಅಂತ ಹೇಳಿದಿರಿ. ಆಂಧ್ರ ಮತ್ತು ಮದರಾಸಿನಲ್ಲಿ ಜಾಸ್ತಿ ನೀರಾವರಿ ಮಾಡುವುದಕ್ಕೆ ಕಾರಣವೇನು? ನಮ್ಮ ರಾಜ್ಯದಲ್ಲಿ ಕಡಿಮೆ ಮಾಡುವುದಕ್ಕೆ ಕಾರಣವೇನು? ತಮ್ಮ ಪ್ರಭಾವ ಅಲ್ಲಿ ಹೆಚ್ಚಿಗೆ ಬೀರಲಿಲ್ಲ ಎಂದು ತಿಳಿದುಕೊಳ್ಳೋಣವೋ? ಅಥವಾ ಸರಿಯಾದ ರೆಪ್ರೆಸೆಂಟೇಶನ್ ಇಲ್ಲ ಅಂತ ಅಂದುಕೊಳ್ಳೋಣವೋ?

ಶ್ರೀ ವೀರೇಂದ್ರ ಪಾಟೀಲ್.—ಕೇಳಿದ್ದೆ ಕೇಳುತ್ತಾರೆ. ನಾನು ಎಷ್ಟೊಸಾರಿ ಹೇಳಿದ್ದೇನೆ. 3ನೇ ಪಂಚವಾರ್ಷಿಕ ಯೋಜನೆ ಫೈನಲೈಸ್ ಆಗುವುದಕ್ಕೆ ಮುಂಚೆ 250 ಕೋಟಿ ರೂಪಾಯಿಯನ್ನು ಯಾವ ಯಾವ ರೀತಿ ಖರ್ಚುಮಾಡಬೇಕೆಂದು ಯೋಚಿಸಿ, ಕಮ್ಯೂನಿಕೇಶನ್ನಿಗೆ ಏನು ಖರ್ಚುಮಾಡಬೇಕು, ಅಗ್ರಿಕಲ್ಚರ್, ಮೈನರ್ ಇರ್ರಿಗೇಶನ್, ಮೇಜರ್ ಮತ್ತು ಮೀಡಿಯಮ್ ಇರ್ರಿಗೇಶನ್‌ಗೆ ಎಷ್ಟೆಷ್ಟು ಖರ್ಚುಮಾಡಬೇಕು ಅಂದು ಅವರೂ ನಾವು ಆಲೋಚನೆ ಮಾಡಿ ನಿರ್ಣಯ ಮಾಡಿದ್ದೇವೆ; ಆ ನಿರ್ಣಯದ ಪ್ರಕಾರ 40 ಕೋಟಿ 66 ಲಕ್ಷ ಇಟ್ಟಿದ್ದೇವೆ. ನಾಲ್ಕು ಮತ್ತು 5ನೇ ಯೋಜನೆಯಲ್ಲಿ ನಾವು ಇನ್ನೂ ಹೆಚ್ಚು ಖರ್ಚ ಮಾಡಬೇಕಾಗಿ ಬರುತ್ತದೆ. ಹೆಚ್ಚು ನೀರನ್ನು ಉಪಯೋಗಿಸ ಬೇಕಾಗಿದೆ. ಹೆಚ್ಚು ಹೆಚ್ಚು ಹಣ ಒದಗಿಸಬೇಕಾಗುತ್ತದೆ. ಪ್ಲಾನಿಂಗ್ ಕಮಿಶನ್ನಿನವರನ್ನು ದೂಷಿಸುವ ಹಾಗಿಲ್ಲ. ನಮ್ಮಲ್ಲಿ ಎಷ್ಟು ಪ್ರಮಾಣದಲ್ಲಿ ದುಡ್ಡು ಇದ್ದರೆ ಅಷ್ಟು ಪ್ರಮಾಣದಲ್ಲಿ ಅವರು ಅವರ ಶೇರು ಕೊಡುವುದಕ್ಕೆ ತಯಾರಾಗಿದ್ದಾರೆ ಆದ್ದರಿಂದ ನಮಗೆ ಹೆಚ್ಚು ಸಹಾಯ ಬೇಕಾಗುತ್ತದೆ. ನಾಲ್ಕು ಮತ್ತು 5ನೆಯ ಪಂಚವಾರ್ಷಿಕ ಯೋಜನೆಗಳನ್ನು ಫೈನಲೈಸ್ ಮಾಡುವಾಗ ಇದನ್ನು ವಿಚಾರ ಮಾಡುತ್ತೇವೆ.

ಶ್ರೀ ಎನ್ ಹುಚ್ಚಮಾಸ್ತಿ ಗೌಡ.—ಭಾರಿ ಪ್ರಮಾಣದ ನೀರಾವರಿ ಕಾಂಗಾರಿಗಳಿಗೆ ಸಾಕಾದಷ್ಟು ಹಣವನ್ನು ಸರಕಾರದವರು ಒದಗಿಸುವುದಕ್ಕೆ ಆಗದೆ ಇರುವುದರಿಂದ, ಕೇಂದ್ರ ಸರಕಾರದವರು ಕೆಲವು ಕಾಂಗಾರಿಗಳನ್ನು ತೆಗೆದುಕೊಳ್ಳಬೇಕು ಎಂದು ಕೇಂದ್ರದೊಡನೆ ಮಾಡಿದ ಆಲೋಚನೆ ಎಷ್ಟರ ಮಟ್ಟಿಗೆ ಆಗಿದೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಆವಾಗಲೆ ಹೇಳಿದ್ದೇನೆ. ದೊಡ್ಡ ದೊಡ್ಡ ಪ್ರಮಾಣದ ಯೋಜನೆಗಳಿಗೆ ನೂರಾರು ಕೋಟಿ ರೂಪಾಯಿಗಳನ್ನು ಪಾಕಿದೆ, 2ನೇ ಡೆವಲಪ್‌ಮೆಂಟಿಗೆ ದುಡ್ಡು ಇರುವುದಿಲ್ಲ; ಕೇಂದ್ರ ಸರಕಾರದವರನ್ನು ತೆಗೆದುಕೊಂಡು ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ. ಕೇಂದ್ರದವರು ಇನ್ನೂ ಯಾವ ನಿರ್ಣಯಕ್ಕೂ ಬಂದಿಲ್ಲ.

ಶ್ರೀ ಎನ್. ಶಿವಪ್ಪ.—3ನೇ ಪಂಚವಾರ್ಷಿಕ ಯೋಜನೆಯಲ್ಲಿ, ಮೇಜರ್ ಪ್ರಾಜೆಕ್ಟಿಗೆ, 40 ಕೋಟಿ ರೂಪಾಯಿನಲ್ಲಿ ಇವುವರೆಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ? ಖರ್ಚು ಮಾಡಿರತಕ್ಕಂಥ ಹಣ ಎಷ್ಟು, ಟಾರ್ಗೆಟ್ ರಿಚ್ ಆಗಿದೆ ದಯವಿಟ್ಟು ತಿಳಿಸಿ.

ಶ್ರೀ ವೀರೇಂದ್ರ ಪಾಟೀಲ್.—ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಸ್ಟೇಟ್‌ಮೆಂಟ್ ಬೇಕಾದರೆ ನಾನು ಕೊಡಲಿಕ್ಕೆ ತಯಾರಿದ್ದೇನೆ.

Sri S. SIVAPPA.—The percentage of money spent out of 40 crores of rupees and also the percentage of physical targets reached according to the money spent.

Sri VEERENDRA PATIL.—I have prepared a Note. It contains all that information. I will place it on the Table of the House.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರು ಭಾರಿ ನೀರಾವರಿ ಯೋಜನೆಗಳಿಗೆ ಸಂಪನ್ಮೂಲಗಳನ್ನು (ರಿಸೋರ್ಸಸ್) ಹೆಚ್ಚು ಮಾಡಬೇಕು ಎಂದು ಹೇಳಿದರು. ಈಗ ಕೈಗೊಂಡಿರುವ ಮತ್ತು ಕೈಗೊಳ್ಳಬೇಕಾಗಿರುವ ಭಾರಿ ನೀರಾವರಿ ಯೋಜನೆಗಳಿಗೆ ಈಗಿರತಕ್ಕಂಥ ಪ್ಲಾನ್ ಹಣ ಕಡಮೆಯಾಗಿ, ಮುಂದೆ ಬರುವ ಹಣ ಕೂಡ ಕಡಮೆಯಾಗುತ್ತದೆ ಎಂದು ಸರಕಾರಕ್ಕೆ ಗೊತ್ತಿದೆ. ಇವುಗಳನ್ನು ಕೈಗೊಳ್ಳುವುದಕ್ಕೆ ವಿಶೇಷ ಕಾರ್ಯಕ್ರಮವನ್ನು ಸರಕಾರದವರು ತೆಗೆದುಕೊಳ್ಳುತ್ತಾರೆಯೆ ? ಸಂಪನ್ಮೂಲಗಳನ್ನು ಹೆಚ್ಚಿಸಿ ಕೊಳ್ಳುತ್ತಾರೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಸಂಪನ್ಮೂಲವೆಂದರೆ ಅರ್ಥವಾಗಲಿಲ್ಲ. ರಿಸೋರ್ಸಸ್ ಹೇಗೆ ಹೆಚ್ಚು ಮಾಡಬೇಕು ಎಂಬುದು ನಮ್ಮ ಮುಂದಿರುವ ಪ್ರಶ್ನೆ. 40 ಕೋಟಿ 60 ಲಕ್ಷ ರೂಪಾಯಿಯನ್ನು 3 ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೇವೆ. ಅದನ್ನು ಪೂರ್ತಿ ಖರ್ಚುಮಾಡಬೇಕು. ಇರ್ರಿಗೇಷನ್ ನಲುವಾಗಿ ಹೆಚ್ಚು ಹೆಚ್ಚು ಹಣ ಖರ್ಚುಮಾಡುವ ಅವಶ್ಯಕತೆ ಇದೆ; ಎಂಬುದನ್ನು ಈ ಸಭೆಯಲ್ಲಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಯಾವರೀತಿ ರಿಸೋರ್ಸಸ್ ಹೆಚ್ಚು ಮಾಡಬೇಕೆಂಬುದನ್ನು ವಿಚಾರ ಮಾಡುತ್ತಿದ್ದೇವೆ. ತಾವು ಸಹಕಾರ ಮಾಡಿದರೆ ತಮಗೂ ಧನ್ಯವಾದ ಅರ್ಪಿಸುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—3ನೇ ಪಂಚವಾರ್ಷಿಕ ಯೋಜನೆಯಲ್ಲಿ ಇಟ್ಟಿರತಕ್ಕ 40 ಕೋಟಿ ರೂಪಾಯಿಗಳಲ್ಲಿ ಇಲ್ಲಿಯವರೆಗೂ ಈಗಾಗಲೇ 17 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು ಉಳಿದ 23 ಕೋಟಿ ರೂಪಾಯಿಗಳಲ್ಲಿ ಮುಂದಿನ ಸಾಲಿಗೆ 7 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಉಳಿದ 16 ಕೋಟಿ ರೂಪಾಯಿಗಳನ್ನು ಒಂದೇ ವರ್ಷದಲ್ಲಿ ಖರ್ಚು ಮಾಡುತ್ತೀರಾ ? ಆ ರೀತಿ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಖರ್ಚು ಮಾಡುವುದಕ್ಕೆ ಕ್ಯಾಪಾಸಿಟಿ ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಯಾವ ರೀತಿ ಹಣವನ್ನು ಒದಗಿಸಿದ್ದಾರೆ ಆ ರೀತಿ ಖರ್ಚು ಮಾಡುತ್ತಾ ಹೋಗುತ್ತಿದ್ದೇವೆ. ಆದರೆ ಹಾಗೆ ಖರ್ಚು ಮಾಡುವಾಗ ಕೆಲವೊಂದು ಅಡಚಣೆಗಳು ಬರುತ್ತವೆ. ಅದಕ್ಕೆ ಈಗ ಹಾರಂಗಿ, ಹೇಮಾವತಿ ಇವಕ್ಕೆ ದುಡ ನ್ನು ಇಡುತ್ತಾ ಇದ್ದೇವೆ. ಟೆಕ್ನಿಕಲ್ ಕ್ಲಿಯರೆನ್ಸ್ ಬರಲಾರದೇ ಅದನ್ನು ಖರ್ಚು ಮಾಡ ವುದಕ್ಕಾಗುವುದಿಲ್ಲ. ಇದರಲ್ಲೂ ಕೂಡ ಟೆಕ್ನಿಕಲ್ ಕ್ಲಿಯರೆನ್ಸ್ ಬರುವುದು ನಿಧಾನವಾದದ್ದರಿಂದ ಖರ್ಚು ಮಾಡುವದಕ್ಕೆ ಆಗಿಲ್ಲ, ಯಾವ ವೇಗದಿಂದ ಖರ್ಚು ಮಾಡಬೇಕೆಂದು ಇದ್ದೇವೋ ಆ ವೇಗದಿಂದ ಖರ್ಚುಮಾಡುವದಕ್ಕೆ ಆಗಿಲ್ಲ. ಇನು ಕೆಲವೇ ತಿಂಗಳುಗಳಲ್ಲಿ ಈ ಸಮಸ್ಯೆ ಪರಿಹಾರವಾಗುತ್ತದೆ, ದುಡ್ಡು ಸಂಪೂರ್ಣವಾಗಿ ಖರ್ಚಾಗಬಹುದು ಎಂಬ ಆಶೆಯನ್ನು ಇಟ್ಟುಕೊಂಡಿದ್ದೇವೆ.

Sri SANJEEVANATH AIKALA.—From the written answer, it is seen that 50 per cent of the money has been spent in 9 months and from the oral answer, it can be seen that 25 per cent is spent in two months, and at the fag end of the month, in one month, the department wants to spend the balance. Can the Department spend the balance at the fag end of the year and if so, would the work receive proper attention.

Sri VEERENDRA PATIL.—The Hon'ble member knows that the working conditions is different in the project areas where we have taken this work. During monsoon, we cannot show progress. This is the working season. For three or four months in maidan areas, we cannot show progress. But in Malnad we cannot show progress for over six months. As and when progress is shown, we make payment. For a progress of 100 rupees, we pay 75 rupees.

ಶ್ರೀ ಎಚ್. ಡಿ. ದೇವೇಗೌಡ.—ಬಡ್ಜೆಟ್‌ನಲ್ಲಿ ಹಣ ಒದಗಿಸಿದರೂ ಕೂಡ ಖರ್ಚು ಮಾಡುವುದರ ಬಗ್ಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬರುವದಕ್ಕೆ ಅಡ್ಡಿ ಇರುವದರಿಂದ ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ತಾವು ಹೇಳಿದಿರಿ. ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯುತಕ್ಕ ಸಂದರ್ಭದಲ್ಲಿ ನಿಮ್ಮ ರಾಜಕೀಯ ಗೊಂದಲ ಇಂಟರ್‌ಫಿಯರ್ ಆಗಿ ಆದಷ್ಟು ಜಾಗ್ರತೆ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ಇಂದ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯಲಿಕ್ಕೆ ಆತಂಕವಾಗಿಲ್ಲವೇ ಎಂಬುದನ್ನು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಯಾವ ರಾಜಕೀಯದಿಂದಲೂ ಕೂಡ ಆತಂಕವಾಗಿಲ್ಲ. 61ಕ್ಕೆ ಯಾವ ಯಾವ ಪ್ರಾಜೆಕ್ಟುಗಳನ್ನು ಕಳುಹಿಸಿದ್ದೆವೋ ಅವುಗಳಿಗೆ ಅವರು ಅಬ್ಸರ್ವೇಷನ್ ಮಾಡಿ ಹಿಂದಕ್ಕೆ ಕಳುಹಿಸಿದ್ದರು, ಏಕೆಂದರೆ ಟೆಕ್ನಿಕಲ್ ಅಥಾರಿಟಿ ಅವರು, ಅವರು ಹೇಳದೇ ಪಾನಿಗ್ ಕಮಿಷನ್ ಅವರು ಕ್ಲಿಯರೆನ್ಸ್ ಕೊಡುವಹಾಗಿಲ್ಲ. ಅದಕ್ಕೆ ನಾವು ಸಮರ್ಪಕವಾದ ಉತ್ತರ ಕೊಡಬೇಕಾಗುತ್ತದೆ, ಅವರು ಇನ್‌ವೆಸ್ಟಿಗೇಟ್ ಮಾಡಬೇಕೆಂದಾಗ ಮಾಡಬೇಕಾಗುತ್ತದೆ. ಎಲ್ಲಾ ಪ್ರಾಜೆಕ್ಟುಗಳಿಗೂ ಉತ್ತರ ಕೊಟ್ಟು ಕಳುಹಿಸಿದ್ದೇವೆ. ಇಪ್ಪರೊಳಗೇ ಟೆಕ್ನಿಕಲ್ ಕ್ಲಿಯರೆನ್ಸ್ ಬರುತ್ತದೆ, ಆತಂಕವಾಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ.

Linking of Bhalki with Nilanga (in Maharashtra) with Inter-State Telephone connections.

*Q.—368. Sri BAPU RAO ANANDA RAO HULSOORKER (Hulsur).—

Will the Government be pleased to state :—

whether there has been any proposal to link Bhalki with Nilanga (in Maharashtra, with Inter-State Tel phone connections ?

A.—Sri G. B. SHANKAR RAO (Parliamentary Secretary to the Minister for Public Works).—

No.

Sri BAPU RAO ANAND RAO HULSUNKAR.—May I know whether any survey has been made for getting this telephone connection ?

Sri G. B. SHANKAR RAO.—For the information of the Hon'ble Member, I may say that we have received a communication from the Postal department that survey has been made to give tele-communication facilities to three places Auroad, Hadlikode and another place and the work will commence as soon as tele-communication Equipments are received.

Providing drinking water facilities to the villages in Yelburga Taluk.

*Q.—373. Sri VEERABHADRAPPA ERAPPA (Yelburga).—

Will the Government be pleased to state :—

(*a*) the names of villages in Yelburga Taluk from which applications have been received for the past three years requesting them to provide drinking water facilities together with the dates of applications ;

(*b*) the action taken by them in this regard ?

A.—Sri RAMAKRISHNA HEGDE (Minister for Development, Panchayati Raj and Co-operation).—

(*a*).—

Year	Sl. No.	Name of the Village	Date of application received for providing Drinking Water Wells.
1	2	3	4
1960-61	1	Bevoor ...	... 2—9—1960
	2	Kalur ...	... 12—9—1960
	3	Sanknur ...	... 13—9—1960
	4	Chikoppa (Tanda) ...	... 13—9—1960
	5	Chikka Bannigol (Tanda)	... 13—9—1960
	6	Karmodi ...	... 15—9—1960
	7	Katral ...	... 16—9—1960
	8	Ballotagi ...	... 16—9—1960
1960-61	9	Chikka Myagera Tanda)	... 11—10—1960
	10	Adur ...	... 4—11—1960
	11	Rajur ...	... 4—11—1960
	12	Bannikoppal ...	... 19—11—1960
	13	Sirguppa ...	... 21—11—1960
	14	Tondihal ...	... 1—12—1960
	15	Mannapur ...	... 17—12—1960
	16	Yerihanchinal ...	... 10—1—1961
	17	Talbal ...	... 18—1—1961
1961-62	18	Kuknur ...	... 10—4—1961
	19	Kuknur (H) ...	... 16—5—1961
	20	Chikkavankalkunta ...	... 11—7—1961
	21	Veerapur ...	... 12—9—1961
1962-63	22	Chandur ...	... 12—9—1961
	23	Sidne Koppal ...	... 18—9—1961
	24	Hire Beedanhal ...	... 4—10—1961
	25	Karmodi ...	... 5—10—1961
	26	Sanknur ...	... 12—10—1961
	27	Tedakal ...	... 28—10—1961
	28	Ballotgi ...	... 7—11—1961
	29	Mandal Mark ...	... 3—5—1962
	30	Byranaikanahally ...	... 24—5—1962
	31	Narsapur ...	... 24—5—1962
	32	Kudugunti ...	... 25—5—1962
	33	Tallur (Tanda) ...	... 30—5—1962
	34	Uppal Dinni ...	... 22—6—1962
	35	Nelgeri ...	... 17—7—1962

1	2	3			4
	36	Mannapur	...	...	1—8—1962
	37	Madlur	...	...	3—8—1962
	38	Hulagudde	...	...	10—8—1962
	39	Bonnakoppal	...	...	20—8—1962
	40	Karihalli	...	...	1—9—1962
	41	Tummaraguddi	...	...	20—9—1962
	42	Vangera	...	...	22—9—1962
	43	Chandihal	...	...	1—10—1962
	44	Mangalore	...	...	3—10—1962
1962-63	45	Kudurimoti	...	...	17—10—1962
	46	Male Koppa	...	...	18—10—1962
	47	Binnal	...	...	18—10—1962
	48	Toudihal	...	...	18—10—1962
	49	Balgeral	...	...	25—12—1962
	50	Basalpur	...	...	28—2—1963

(*b*) Wells have been completed in 16 cases; they are in progress in 22 cases and action is being pursued in the others.

ಶ್ರೀ ವೀರಭದ್ರಪ್ಪ ಈರಪ್ಪ.—ತಮ್ಮ ಉತ್ತರದಲ್ಲಿ 16 ಬಾವಿಗಳ ಕಾಮಗಾರಿಯನ್ನು ಪೂರೈಸಲಾಗಿವೆ, 22 ಬಾವಿಗಳ ಬಗ್ಗೆ ಕಾಮಗಾರಿಯು ಮುಂದುವರಿಯುತ್ತಿದೆ ಎಂದು ತಿಳಿಸಿದ್ದೀರಿ. ಹಾಗೆ ಪೂರೈಸಲಾದ ಬಾವಿಗಳ ಹೆಸರು ಮತ್ತು ಮುಂದುವರಿಯುತ್ತಿರುವ ಕಾಮಗಾರಿಗಳ ಹೆಸರುಗಳು ಏನು ?

† ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಬಹಳ ದೊಡ್ಡ ಪಟ್ಟಿಯಾಗುತ್ತದೆ, ಅದನ್ನು ತಮಗೆ ಕೊಡುತ್ತೇನೆ, ಮತ್ತು ಸದ್ಯದಲ್ಲಿ ಮತ್ತೆ 6 ಬಾವಿಗಳ ಕೆಲಸ ಪೂರ್ಣವಾಗಿದೆ, ಅದು ಯಾವ ಹಳ್ಳಿಯಲ್ಲಿ ಆಗಿದೆ ಎಂಬುದನ್ನೂ ಕೂಡ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

Nationalising the bus routes of Kushalnagara-Mercara-Puttur-Mangalore.

*Q.—480. Sri S. SUBBAYYA NAIK (Sullia).—

Will the Government be pleased to state:—

(*a*) when they propose to nationalise the bus route, namely. Kushalnagara-Mercara-Puttur-Mangalore routes;

(*b*) whether they would allow the private buses now plying on the above routes to run on some other routes, issuing licences to the affected operators;

(*c*) whether they would purchase private buses now plying on the routes proposed to be nationalised;

(*d*) whether they would take action to absorb Drivers, Conductors and other staff attached to such Private Service in Government Transport Services?